**OS 306/2013**
**PW-1**

**ದಿನಾಂಕ: 18.06.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ. ಎ ಎಲ್ ಎಸ್ ವಕೀಲರಿಂದ:

ಪ್ರತಿವಾದಿಯವರು ವಾಸಿಸುತ್ತಿರುವ ತೊಟ್ಟಿ ಮನೆಯ ಪಕ್ಕದ ಜಾಗವು ಈ ಹಿಂದೆ ನನ್ನ ತಂದೆಯ ಚಿಕ್ಕಪ್ಪನ ಸ್ವತ್ತು ಆಗಿತ್ತು ಎಂದರೆ ಸರಿ. ಪ್ರತಿವಾದಿಯವರು ಸದರಿ ತೊಟ್ಟಿ ಮನೆಯ ಪಕ್ಕದ ಜಾಗವನ್ನು ನನ್ನ ತಂದೆಯ ಚಿಕ್ಕಪ್ಪನಾದ ಮಂಚೇಗೌಡರವರಿಂದ ನೊಂದಾಯಿತ ಕ್ರಯ ಪತ್ರದ ಮೂಲಕ ಖರೀದಿಸಿದ್ದರು ಎಂದರೆ ಸರಿ. ಕಗ್ಗಲಿಪುರ ಗ್ರಾಮದಲ್ಲಿ ನಾನು ಹುಟ್ಟಿ ಬೆಳೆದಿರುತ್ತೇನೆ. ನಮ್ಮ ಮತ್ತು ಪ್ರತಿವಾದಿಯ ಮನೆಯು ಅಕ್ಕ ಪಕ್ಕದಲ್ಲಿ ಇದೆ ಎಂದರೆ ಸರಿ. ಪ್ರತಿವಾದಿಯು ವಾಸಿಸುತ್ತಿರುವ ಮನೆಯ ಅವರು ವಾಸಿಸುತ್ತಿರುವ ಮನೆ ಎಂದರೆ ಸರಿ. ಪ್ರತಿವಾದಿಯ ತಂದೆಯ ಹೆಸರನ್ನು ಚಿಕ್ಕವನು ಎಂದು ಕರೆಯುತ್ತಿದ್ದರು ಎಂದರೆ ಸರಿ.

ಪ್ರತಿವಾದಿಯ ತಂದೆಯು ಮರಣ ಹೊಂದಿದ ನಂತರ ಮೇಲೆ ತಿಳಿಸಿದ ತೊಟ್ಟಿ ಮನೆಯನ್ನು ದಿನಾಂಕ 05.05.1955 ರಂದು ಎರಡು ಭಾಗಗಳಾಗಿ ವಿಭಾಗ ಮಾಡಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಸದರಿ ತೊಟ್ಟಿ ಮನೆಯಲ್ಲಿ ಪ್ರತಿವಾದಿ ಮತ್ತು ಅವರ ಸಹೋದರ ಅರ್ಧ ಅರ್ಧ ಭಾಗಗಳಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸರಿ. ಸದರಿ ಪ್ರತಿವಾದಿ ಮತ್ತು ಅವರ ಸಹೋದರರು ಸದರಿ ತೊಟ್ಟಿ ಮನೆಯ ಮಧ್ಯ ಒಂದು ಗೋಡೆ ನಿರ್ಮಿಸಿಕೊಂಡರು ಎಂದರೆ ಸರಿ. ನಂತರ ಪ್ರತಿವಾದಿಯವರಿಗೆ ತೊಟ್ಟಿ ಮನೆಯಲ್ಲಿ ಜಾಗ ಸಾಲದೇ ಇದ್ದುದರಿಂದ 1989 ರಲ್ಲಿ ಪ್ರತಿವಾದಿಯು ನನ್ನ ತಂದೆಯ ಚಿಕ್ಕಪ್ಪ ಮಂಚೇಗೌಡರವರಿಂದ 69*69 ಅಡಿಯ ಅಳತೆಯ ಖಾಲಿ ಜಾಗವನ್ನು ಖರೀದಿಸಿದ್ದರು ಎಂದರೆ ಸರಿ. ಸದರಿ ಖಾಲಿ ಜಾಗವನ್ನು ಖರೀದಿಸಿದ ನಂತರ ತೊಟ್ಟಿ ಮನೆಯಿಂದ ಖಾಲಿ ಜಾಗದ ಕಡೆಗೆ ಮಣ್ಣಿಗೆ ಇಟ್ಟಿಗೆ ಗೋಡೆಯನ್ನು ನಿರ್ಮಿಸಿ ಮಂಗಳೂರು ಹೆಂಚನ್ನು ಒದಿಸಿದರು ಎಂದರೆ ಸರಿಯಲ್ಲ. ನಿಡಿ-1 ರಲ್ಲಿ ಕಾಣುವ ಸುಣ್ಣದ ಗೋಡೆಯು ನಾಡ ಹೆಂಚಿನ ತೊಟ್ಟಿ ಮನೆ ಎಂದರೆ ಸರಿ. ಸದರಿ ನಿಡಿ-1 ರಲ್ಲಿ ಕಾಣುವ ಮಣ್ಣಿನ ಇಟ್ಟಿಗೆ ಗೋಡೆಯ ಮಂಗಳೂರು ಹೆಂಚಿನ ವರಾಂಡವು ಹೊಸದಾಗಿ ನಿರ್ಮಿಸಿದ ಮನೆ ಎಂದರೆ ಸರಿ. ಮಣ್ಣಿನ ಇಟ್ಟಿಗೆ ಗೋಡೆಯ ವರಾಂಡದ ಪಶ್ಚಿಮಕ್ಕೆ ಇರುವ ಖಾಲಿ ಜಾಗವು ಪ್ರತಿವಾದಿಯವರ ಜಾಗ ಎಂದರೆ ಸರಿ. ನಿಡಿ-2 ರಲ್ಲಿ ಕಾಣುವ ಭಾವ ಚಿತ್ರದಲ್ಲಿ ಇಟ್ಟಿಗೆ ಗೋಡೆಯ ಅರ್ಧ ಹೊಡೆದು ಸದರಿ ಅರ್ಧ ಜಾಗದಲ್ಲಿ ಮತ್ತು ಖಾಲಿ ಜಾಗದಲ್ಲಿ ಅಡಿಪಾಯ

**OS 306/2013**
**PW-1**

ನಿರ್ಮಿಸಿದ್ದಾರೆ ಎಂದರೆ ಸರಿ. ಸದರಿ ಅಡಿಪಾಯ ಹಾಕಿರುವ ಜಾಗದಲ್ಲಿ ನಮಗೆ ಓಡಾಡಲು 5 ಗಜ ದಾರಿ ಇದೆ ಎಂದು ನಾವು ಈ ದಾವೆಯನ್ನು ಸಲ್ಲಿಸಿರುತ್ತೇವೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಲಯ, ಟಿ ನರಸಿಪುರ